O.S. 6/2015
P.W.1

**<u>ಸಾಕ್ಷಿಯನ್ನು ದಿನಾಂಕಃ 18-07-2024 ರಂದು ಕರೆಯಿಸಿ ಪ್ರಮಾಣ ವಚನ ನೀಡಲಾಯಿತು.</u>**

**<u>ಪಾಟೀ ಸವಾಲು ಪ್ರತಿವಾದಿ ಪರ ವಕೀಲರವರಿಂದಃ</u>**

ನನ್ನ ತಂದೆಯ ಹೆಸರು ಹನುಮಂತಪ್ಪ ಅಡ್ಡ ಹೆಸರು ಚಿಗರಿ ಹನುಮಂತಪ್ಪ ಎಂದು ಇರುವುದು. ಅವರು 8-10 ವರ್ಷಗಳ ಹಿಂದೆ ಮೃತ ಪಟ್ಟಿರುವರು. ನಮ್ಮ ತಂದೆಗೆ ನಾವು ಒಟ್ಟು 5 ಜನ ಮಕ್ಕಳು. ಅವರೆಂದರೆ ಭೀಮಕ್ಕ, ಹಾಲಮ್ಮ, ಹಾಲೇಶಪ್ಪ, ಕಂಡೇಶಪ್ಪ ಹಾಗೂ ನಾಗರಾಜ್. ಆ ಪೈಕಿ ಹಾಲಮ್ಮ ಮತ್ತು ಹಾಲೇಶ್ ಮೃತ ಪಟ್ಟಿರುವರು ಎಂದರೆ ಸರಿ. 1 ನೇ ಪ್ರತಿವಾದಿ ನನ್ನ ಅತ್ತಿಗೆ ಎಂದರೆ ಸರಿ. 3 ನೇ ಪ್ರತಿವಾದಿ ನನ್ನ ತಾಯಿ ಎಂದರೆ ಸರಿ. ನಾವೆಲ್ಲರೂ ಈಗ ಜಂಟಿ ಕುಟುಂಬದಲ್ಲಿದೆ ಎಂದರೆ ಸರಿ. ನಮ್ಮ ಕುಟುಂಬದಲ್ಲಿ ಈ ವರೆಗೆ ಯಾವುದೇ ಪಾಲು ವಿಭಾಗ ಆಗಿರುವುದಿಲ್ಲ ಎಂದರೆ ಸರಿ. ದಾವಾ ಆಸ್ತಿಯ ವಿಸ್ತೀರ್ಣ 13 ಸೆಂಟ್ಸ್ ಇರುವುದು. ದಾವಾ ಆಸ್ತಿ ಇದು ನಮ್ಮ ಜಂಟಿ ಕುಟುಂಬದ ಆಸ್ತಿ ಎಂದರೆ ಸರಿ. ಅದು ನಮ್ಮ ಜಂಟಿ ಸ್ವಾಧೀನ ಅನುಭವದಲ್ಲಿದೆ ಎಂದರೆ ಸರಿ. ನನ್ನ ತಾಯಿ ಈಗ ಜೀವಂತ ಇರುವವರು. ಅವರ ಯೋಗ ಕ್ಷೇಮವನ್ನು ನಾವು ನೋಡಿಕೊಳ್ಳುತ್ತಿಲ್ಲ ಎಂದರೆ ಸರಿಯಲ್ಲ. ಅವರು ಪ್ರತ್ಯೇಖವಾಗಿ ವಾಸ ಮಾಡುತ್ತಿರುವರು ಎಂದರೆ ಸರಿ. ಅವರ ಯೋಗ ಕ್ಷೇಮವನ್ನು 2 ನೇ ಪ್ರತಿವಾದಿ ನೋಡಿಕೊಳ್ಳುತ್ತಿರುವರು ಎಂದರೆ ಸರಿಯಲ್ಲ.

ದಾವಾ ಆಸ್ತಿಯು ಈಗ ನನ್ನ ಅಣ್ಣನಾದ ಹಾಲೇಶಪ್ಪನ ಹೆಸರಿನಲ್ಲಿದೆ. 1983 ರಲ್ಲಿ ನನ್ನ ತಂದೆ ಪೂರ್ವ ಪಶ್ಚಿಮ 13 ಮಳ ಉತ್ತರ ದಕ್ಷಿಣ 11 ಮಳವನ್ನು ಮಣ್ಣು ವಡ್ಡರ ಹನುಮಪ್ಪ ತಂದೆ ಬಿದ್ದಾಡಪ್ಪ ಇವರಿಂದ ಖರೀದಿ ಮಾಡಿದ್ದರು ಎಂದರೆ ಸರಿ. ಉಳಿದ ಜಾಗವನ್ನು ನಾವು ಖರೀದಿ ಮಾಡಿಕೊಂಡು ಅದನ್ನು ಹಾಲೇಶಪ್ಪನ ಹೆಸರಿಗೆ ಮಾಡಿದ್ದೇವೆ ಎಂದರೆ ಸರಿ. ನಾವು ಜಂಟಿ ಕುಟುಂಬದ ಆದಾಯದಿಂದ ದಾವಾ ಆಸ್ತಿಯನ್ನು ಖರೀದಿಸಿ ನಮ್ಮ ಅಣ್ಣ ಹಾಲೇಶಪ್ಪನ ಹೆಸರಿಗೆ ಮಾಡಿದ್ದೇವೆ ಎಂದರೆ ಸರಿ. ದಾವಾ ಆಸ್ತಿ ಜಂಟಿ ಕುಟುಂಬದ ಆಸ್ತಿಯಾದ ಕಾರಣ 3 ನೇ ಪ್ರತಿವಾದಿಗೆ ಹಕ್ಕು ಇರುತ್ತದೆ ಎಂದರೆ ಸರಿ.

**ಪಾಟೀ ಸವಾಲು 1 ನೇ ಪ್ರತಿವಾದಿ ಪರ ವಕೀಲರು ಸಮಯ ಕೋರಿದ್ದು ಮುಂದೂಡಲಾಯಿತು**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸರಿಯಿದೆ.**

**ಸಿವಿಲ್ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ಹರಪನಹಳ್ಳಿ**